ಎಂದು ಕೈ ಮಾಡಿ ನನಗೂ ಕೈ ಮುಗಿದು ಕಳಿಸಿದ. ಕಾರು ಭರ್ರನೆ ಸಾಗಿತು. 'ಭರ್ರ್' ಎಂದು ಸದ್ದು ಮಡುತ್ತಿತ್ತಷ್ಟೇ. ಮುಂದೆ ಓಡಲು ಜಾಗವೆಲ್ಲಿತ್ತು? ಭರ್ತಿ ಟ್ರಾಫಿಕ್. ತಿಂಡಿ ಮುಗಿಸಿಕೊಂಡು ಬಿಟ್ಟದ್ದೇ ಒಳ್ಳೆಯದಾಯಿತು. ಕಾರು ತುಂಬಿದ ಬಸುರಿಯಂತೆ ಮೆಲ್ಲಮೆಲ್ಲಗೆ ತೆವಳುತ್ತ, ಮುಲುಕುತ್ತ ಯಶವಂತಪುರ, ನೆಲಮಂಗಲ ದಾಟಲು ಎರಡು ಗಂಟೆಗಳೇ ಹಿಡಿದವು. ಮುಂದೆ ಮಾತ್ರ ಸುತ್ತಲಿನ ವಾಹನಗಳನ್ನು ಬಳಸಿಕೊಂಡು ವೇಗವಾದರೂ ಸುರಕ್ಷಿತವಾಗಿ ಆನಂದವಾಗುವಂತೆ ಓಡಿತು. "ಬೆಳಗಾವ್ಯಾಗ ನನ್ನ ಗೆಳ್ಯಾನ ಕಾರು ನಾನ ಹೊಡೀತಿದ್ದೆ" ಎಂದು ಸಮರ್ಥನೆ ಕೊಟ್ಟ ರಾಜೇಶ ಕಾರು ಚೆನ್ನಾಗಿ ಚಲಾಯಿಸುತ್ತಿದ್ದ ಎನ್ನುವದರಲ್ಲಿ ಎರಡು ಮಾತಿಲ್ಲ. ರಸ್ತೆಯಲ್ಲೇ ದೃಷ್ಟಿ ನೆಟ್ಟರೂ ನನ್ನೊಡನೆ ಆಫೀಸಿನ ಸುದ್ದಿಗಳನ್ನು ಸಮಾಚಾರಗಳಾಗಿ ವಿಸ್ತರಿಸುತ್ತ... ದಾರಿ ಸಾಗುತ್ತಿತ್ತು. ಆಫೀಸಿನ ವಿಷಯಗಳನ್ನು ಇವನ ಮುಂದೆ ಕೆದಕುವದೇ ಅಪಾಯವೆನಿಸಿತು. ನಿಶ್ಚಿಂತೆಯಾಗಿ ಹಿಂದಕ್ಕೆ ಒರಗಿಕೊಂಡು "ಆಫೀಸಿನ ರಗಳೆ ಇರೂದ ಬಿಡೋ ಮಾರಾಯಾ. ಮುಗೀಲಾರದ್ದದು. ಬಿಟ್ಟು ಬ್ಯಾರೇ ಏನರೇ ಹೇಳು. ನಿನ ದೋಸ್ತ ಏನೋ ಮನಿ... ಕಥಿ... ಅಂತ ಹೇಳ್ಲಿಕ್ಕತ್ತಿದ್ನಲಾ. ಅದನ ಹೇಳು. ನನಗ ಬರೀಲಿಕ್ಕೆ ವಸ್ತು ಸಿಗತದೇನ ನೋಡೋಣ" ಎಂದು ವಿಷಯ ಬದಲಾಯಿಸಿದೆ. ಒಂದು ಕ್ಷಣ ಗಂಭಿರವಾದವ ನಂತರ ಮುಖಭಾವ ಸಡಲಿಸಿದ. ಉತ್ಸಾಹ ಉಕ್ಕಿದಂತೆ ಮುಖದಲ್ಲಿ ಹರುಷ ಚಿಮ್ಮಿಸುತ್ತ, "ಇಂವಲ್ಲ, ಇವರಣ್ಣ ನನ್ನ ಖಾಸಾ ದೋಸ್ತರಿ. ಅಂವ ಯಾವಾಗಲೂ ತನ್ನ ಮನಿ ಕಥಿ ಹೇಳಾಂವಾ. ಅಂವಾ ಹೇಳಿಧಂಗ ಅಂವನ ಬಾಯಲೆ ಹೇಳ್ತೇನಿ. ಕೇಳ್ರಿ" ಎಂದು ಆರಂಭಿಸಿದ.

"ಖಾನಾಪುರದಾಗ ಮಲಪ್ರಭಾ ನದಿ ಹರೀತಿತ್ತು. ಅಲ್ಲಿಂದ ನಮ್ಮನಿ ಎಡ್ಡ ಮಿನಿಟು. ಓಡಿ ಹೋಗಿ ಈಶ್ಯಾಡೋದರ ಮಜಾನ ಬ್ಯಾರೇದಿತ್ತು. ಚಡ್ಡಿ ಖಬರಿಲ್ಲದನ ಈಸು ಹೊಡಿತಿದ್ವಿ. ಎಲ್ಲಾರೂ ಕೂಡಿ ಆಡತಿದ್ವಿ. ಊರಾಗ ಬ್ರಾಹ್ಮಣರ ಓಣಿಗೊಳ ಬ್ಯಾರೇ ಇದ್ದು. ನಮ್ಮನ್ ಮುಟ್ಟಿಸಿಕೊಂಡರ ಧೊಡ್ಡಾವರಿಗೆ ಸಿಟ್ಟು ಬರತಿತ್ತು. ನಮ್ಮ ಗೆಳ್ಯಂದರೂ ಅಷ್ಟ ಜೋರಿದ್ರು. ನಮ್ಮ ಜೋಡೀನ ಆಡಿ 'ನಾ ಅಂವನ ಸಂಗ್ತಿ ಆಡಿಲ್ಲವಾ' ಎಂದು ಆಣೆ ಮಾಡಿ ಹೇಳೋವಷ್ಟು ಘಟ್ಟಿ ಗೆಳೆತನಾ ನಮ್ಮದು. ಎಷ್ಟು ಭೊಲೊ ಇದ್ದು ಆ ದಿನಗೋಳು. ನಮ್ಮಪ್ಪ ಪರೆಪ್ಪ ಮುನಸಿಪಾಲಟಿ ಹಾಸ್ಪಿಟಲ್ದಾಗ ಕೆಲಸಾ ಮಾಡ್ತಿದ್ದ. ಡಾಕ್ಟರ್ ಅಲ್ಲ ಮತ್ತ. ಕ್ಲೀನರ್ ಕಮ್ ಆಯಾ ಕಮ್ ಹೆಲ್ಪರ್ ಕಮ್... ಎಲ್ಲಾ ಇಂವೊಬ್ಬಾಂವನ. ಹತ್ತ ಹಾಸಿಗೀದು ದವಾಖಾನಿ. ಎರಡ ಹಾಸಿಗಿ ಬ್ಯಾರೇ ಖೋಲ್ಯಾಗಿದ್ದದ್ದಕ್ಕ ಅವಕ್ಕ 'ಪೆಸಲ್ ರೂಮು' ಅಂತಿದ್ರು. ಆರಾಮಿಲ್ಲದೋರ್ನ ಎತ್ತಿ ಮಲಗಸೋದು, ಕೇಳಿದಾವ್ರಿಗೆ ಬ್ರೆಡ್, ಛಾ ತಂದು ಕೊಡೋದು, ಹಣ್ಣು, ಬಿಸ್ಕೀಟು ಅಲ್ಲದನ ತುಡುಗಲೆ ಬೀಡಿ, ಸಿಗರೇಟು ಮತ್ತ ಹೆಚ್ಚು ರೊಕ್ಕಾ ಕೈಯಾಗಿಟ್ಟರ ದಾರು ಸೈತ ತಂದು ಕೊಡತಿದ್ದ. ಗಳಿಕೆ ಭೊಲೊ ಇತ್ತು. ಆದರೂ ಅವ್ವ ನಾಲ್ಕ ಮನಿ ಕೆಲಸಾ ಮಾಡತಿದ್ಲು. ಮನಿ ನಡೀಬೇಕಲಾ.

ಹಿಂಗ್ಯಾಕಂತೀರಿ ಅನಬ್ಯಾಡ್ರಿ. ಘಳಿಸಿದ್ದೆಲ್ಲಾ ಶರೆ ಅಂಗಡ್ಯಾಗಿಟ್ಟು ರಾತ್ರಿ ತೂರ್ಯಾಡಕೋತ ಮನಿಗೆ ಬರ್ತಿದ್ದ ನಮ್ಮಪ್ಪ. ಹಿಂಗಾಗಿ ನಮ್ಮವ್ವ ಸಾತವ್ವ ಮನಿ ಕೆಲಸಾ ಮಾಡತಿದ್ಲು. ನಾಕ ಮಂದಿ ಮಕ್ಕಳ ಹೊಟ್ಟಿ ತುಂಬಸಬೇಕಲ್ಲ. ಜೋಡೀಗೆ ನಮ್ಮಪ್ಪನ ಹೊಟ್ಟಿಗೂ ಹಾಕಬೇಕಾಗಿತ್ತು. ಮನೀನ ಅದು... ಗುಡಸಲ ಇದ್ದಂಗ ಇತ್ತು. ಒಟ್ಟ ಎರಡ ಖೋಲಿ. ಅದರಾಗ ಒಂದರಾಗ ಮೂಲ್ಯಾಗ ಅಡಗಿ ಒಲಿ. ಹಿಂದ ಬಚ್ಚಲ ಅಂದ್ರ ಬಾಜೂಕ ಎರಡು ತಗಡ ಇಟ್ಟಿತ್ತಷ್ಟ.